**REGD.NEWS PAPER RNI 50347/1989**
**RNI.Reg.No.KA/BGGPO/2516/2021-23**
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
**BANGALORE – 560026**

Date of publication 18th of every month
Permitted to post on 20th or 21st

**ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)**

# ವಾರ್ತಾಪತ್ರ

**ಕನ್ನಡ ಮಾಸ ಪತ್ರಿಕೆ**



**ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009**
**ದೂರವಾಣಿ : 080–22206151 – 22206152 – 22206153**
**Website: www.kavms.com E-mail: kavmss@gmail.com**

ಸಂಪಾದಕರು:
**ರಾ.ಪ. ರವಿಶಂಕರ್**

ಕಾರ್ಯಾಲಯ ಸಮಯ ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : ೩೫ ಜುಲೈ ೨೦೨೨ ಬೆಲೆ : ೧ ರೂ. ಪುಟಗಳು : ೪ ಸಂಚಿಕೆ : ೭

ಅಧ್ಯಕ್ಷರ ನುಡಿ

# ಸೇವೆಗೆ ಬದ್ಧರಾಗಿ



**ಕಳೆದು ಹೋದ ದಿನಗಳಿಗಾಗಿ ಪರಿತಪಿಸಬಾರದು, ಏಕೆಂದರೆ ಕಳೆದು ಹೋದ ಸಮಯವನ್ನು ಮರಳಿ ಪಡೆಯಲಾಗದು. ಅದಕ್ಕಾಗಿ ಭವಿಷ್ಯದತ್ತ ಆಶಾವಾದಿಗಳಾಗಿ ಕಾರ್ಯನಿರ್ವಹಿಸಿದರೆ ನಾವು ಕಳೆದು ಕೊಂಡಿದ್ದನ್ನು ಭವಿಷ್ಯ ತುಂಬಿ ಕೊಡಬಹುದೆಂಬ** ವಿಶ್ವಾಸದಿಂದ ಕಾರ್ಯನಿರ್ವಹಿಸಲು ಪ್ರಾರಂಭ ಮಾಡಿದ, ನಮ್ಮ ತಂಡದ ಕೆಲಸ ಕಾರ್ಯಗಳಿಗೆ ಸಮಾಜ ಭಾಂದವರು ನೀಡಿದ ಸಹಕಾರ ಅತ್ಯಮೂಲ್ಯ. **ಪರಿಶ್ರಮ ಪಡುವುದರಿಂದ ದೇಹಕ್ಕೆ ತ್ರಾಸವಾಗಬಹುದು, ಮನಸ್ಸಿಗೆ ಕಿರಿಕಿರಿಯಾಗಬಹುದು, ಆದರೆ ಅಂತಿಮವಾಗಿ ನಮಗೆ ದೊರೆಯುವ ಫಲಿತಾಂಶದಿಂದ ನಮಗೆ ಸಿಗುವ ಸುಖ ಶಾಶ್ವತವಾದದ್ದು,** ಅಂತೆಯೇ ನಾವು ತೆಗೆದುಕೊಂಡ ಪರಿಶ್ರಮ, ರಿಸ್ಕ್‌ಗಳು ಉತ್ತಮ ಫಲ ನೀಡಿತು. ಸಮಾಜ ಭಾಂದವರು ಖುಷಿಯಾದರು, ಕೆಲಸ ನಿರ್ವಹಿಸಿದ ನಮಗೆ ಆದ ಸಂತೋಷಕ್ಕೆ ಪಾರವೇ ಇಲ್ಲ. ಹಾಗಂತ ನಮಗೇನೂ ಎಲ್ಲಾ ಕೆಲಸಗಳಲ್ಲಿಯೂ ಯಶಸ್ಸು ಪೂರ್ಣವಾಗಿ ಬರಲಿಲ್ಲ, ನಾನು ನಮ್ಮ ತಂಡ ಕೆಲವೇ ಕೆಲವು ವಿಷಯಗಳಲ್ಲಿ ತೆಗೆದುಕೊಂಡ ತೀರ್ಮಾನಗಳು ನಾವು ಅಂದುಕೊಂಡಂತೆ ಪೂರ್ಣ ಫಲಿತಾಂಶ ನೀಡದಿದ್ದಾಗ ಎಲ್ಲಿ ನಾವು ತಪ್ಪಾಗಿದ್ದೇವೆಂದು ಅರಿತುಕೊಂಡು ಪರಸ್ಪರ ಚರ್ಚಿಸಿ ಬದಲಾವಣೆಗಳೊಂದಿಗೆ ಮತ್ತೇ ಮಾಡಿದ ಪ್ರಯತ್ನಗಳು ಕೈಗೂಡಿತು, ಪ್ರಯತ್ನಕ್ಕೆ ತಕ್ಕ ಪ್ರತಿಫಲ ನಮಗೆ ಒಲಿಯಿತು, ಅಸಹಾಯಕ ಸ್ಥಿತಿಯಲ್ಲಿದ್ದ ನೂರಾರು ಕುಟುಂಬಗಳಿಗೆ ಆಶ್ರಯ, ಸಹಾಯ, ಸಹಕಾರ ನೀಡುವ ಸದಾವಕಾಶ ನಮ್ಮದಾಯಿತು. ಅದಕ್ಕೆ ನಮ್ಮ ಹಿರಿಯರು ಹೇಳಿರುವುದು ನಮ್ಮ ಪಾತ್ರವಿಲ್ಲದೆ ನಾವು ಯಶಸ್ವಿಯಾಗಲು ಸಾದ್ಯವಿಲ್ಲ. **ಪ್ರಯತ್ನದಲ್ಲಿ ನಿಷ್ಠೆ ಇದ್ದಲ್ಲಿ ನಾವು ಸೋಲುವುದಂತೂ ಸಾಧ್ಯವೇ ಇಲ್ಲ. ಜೀವನದ ನಮ್ಮ ಸೋಲು ಗೆಲುವುಗಳಿಗೆ ನಾವೇ ಕಾರಣ. ಸಮಾಜದ ಜನತೆ ನಮ್ಮ ಬಗ್ಗೆ ಏನು ಯೋಚಿಸುತ್ತಾರೆಂಬುದಕ್ಕೆ ನಾವು ಜವಾಬ್ದಾರರಲ್ಲ. ಆದರೆ ಜನತೆ ಯೋಚಿಸುವುದಕ್ಕೆ ನಾವು ಏನು ಕೊಡುತ್ತೇವೆಂಬುದಕ್ಕೆ ನಾವೇ ಜವಾಬ್ದಾರರು.** ನಮ್ಮ ಜನತೆ ಸದಾಕಾಲ ನಮ್ಮ ಬಗ್ಗೆ ಒಳ್ಳೆಯದನ್ನು ಯೋಚನೆ ಮಾಡುವಂತಹ ಯೋಜನೆಗಳನ್ನು ನೀಡಿದೆವು, ಅದು ಇಂದು ಫಲ ನೀಡಿದೆ, ನೀಡುತ್ತಿದೆ, ನೀಡುತ್ತಲೇ ಇರುತ್ತದೆ.

2009 ಅಕ್ಟೋಬರ್ 21ಕ್ಕೆ ನಾನು ಹಾಗೂ ನನ್ನ ತಂಡ ಮಹಾಸಭೆಯ ಆಡಳಿತ ಚುಕ್ಕಾಣಿ ಹಿಡಿದೆವು, ಆದರೆ ಅಂದಿನ ಮಹಾಸಭೆ ಸ್ಥಿತಿಯೇ ಬೇರೆ ಆಗಿತ್ತು **ಅವ್ಯವಸ್ಥೆಗಳ ಆಗರ, ಆರ್ಥಿಕ ದು:ಸ್ಥಿತಿ, ರಾಜ್ಯಾದ್ಯಂತ ಸಂಘಟನೆಯಲ್ಲಿ ಒಡಕು, ಮಹಾಸಭೆ ಬಗ್ಗೆ ಜನ ಸಾಮಾನ್ಯನಿಗೆ ಅರಿವೇ ಇಲ್ಲದಿರುವುದು. ಹೀಗೆ ಸಾಲು ಸಾಲು ಸವಾಲುಗಳು ನಮ್ಮ ಬೆನ್ನಿಗೆ ಇದ್ದವು.** ರಾಜ್ಯದಲ್ಲಿ ನಮ್ಮ ಸಂಘಟನೆಯನ್ನು ಸುಸ್ಥಿತಿಗೆ ತಂದು ಮಹಾಸಭೆ ಬಗ್ಗೆ ಅರಿವು ಮೂಡಿಸಿ, ಮಹಾಸಭೆ ಶಕ್ತಿ ಪ್ರದರ್ಶನ ಮಾಡಲು, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಮ್ಮ ಸಮಾಜದ ಸೇವಾ ಸಂಸ್ಥೆಗಳನ್ನು ಕ್ರಿಯಾಶೀಲವನ್ನಾಗಿಸಿ, ಸಮೃದ್ದ ಸಂಘಟನೆ ನಿರ್ಮಾಣ ಆಗಬೇಕೆಂದು ಆಲೋಚಿಸಿ ಪ್ರಪ್ರಥಮವಾಗಿ ಕೈಗೆತ್ತಿಕೊಂಡ ಯೋಜನೆಯೇ **ವಾಸವಿ ಸಂಕಲ್ಪ ರಥಯಾತ್ರೆ**. ಅದರ ಯಶಸ್ಸಿನ ಹಿನ್ನೆಲೆಯಲ್ಲಿ 2010ರ ಡಿಸೆಂಬರ್ 24, 25, 26 ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ **ಮಹಾಸಬೆ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ**. ಕವಡೆ ಕಾಸಿಲ್ಲದೆ, ಹರುಕು ಮುರುಕು ಸಂಘಟನೆಯ ವ್ಯವಸ್ಥೆಯಲ್ಲಿಯೇ ನಮ್ಮ ತಂಡ ಶತಮಾನೋತ್ಸವ ಕಾರ್ಯಕ್ರಮದ ಯಶಸ್ಸಿಗೆ ತೆಗೆದುಕೊಂಡ ಸವಾಲನ್ನು ಪರಿಣಾಮಕಾರಿಯಾಗಿ ಎದುರಿಸಿ ಯಶಸ್ವಿಯಾಯಿತು. ಅಂದು ನಡೆದ ಶತಮಾನೋತ್ಸವ ಸಮಾರಂಭದ ಯಶಸ್ಸಿನ ಸುಭದ್ರ ಸಂಘಟನೆಗೆ ಸಾಕ್ಷಿಯಾಯಿತು. ರಾಜ್ಯದ ರಾಜಕೀಯ ವಲಯದಲ್ಲಿ ನಮ್ಮ ಸಮಾಜದ ಶಕ್ತಿ ಪ್ರದರ್ಶನದ ಬಗ್ಗೆ ಅರಿವು ಮೂಡಿತು. **ಮರ ಎಲ್ಲಿಯೇ ಇರಲಿ, ಅದರ ಬೇರುಗಳು ನೀರನ್ನು ಹುಡುಕಿಕೊಂಡು ಹೊರಟು ಭೂ ಗರ್ಭದಲ್ಲಿರುವ ನೀರನ್ನು ಹೀರಿ ಮರವನ್ನು ಪೋಷಿಸಿ ಸದಾ ಗಟ್ಟಿಯಾಗಿ ಹಸಿರಾಗಿ, ಫಲಭರಿತವಾಗಿ ಮರವನ್ನು ಇಡುವಂತೆ,** ನಮ್ಮ ಕಾರ್ಯಕರ್ತರು ಸಹ ರಾಜ್ಯಾದ್ಯಂತ ಸಕ್ರಿಯರಾಗಿ ನಿರಂತರವಾಗಿ ಕಾರ್ಯನಿರ್ವಹಿಸಿ ಮಹಾಸಭೆಯನ್ನು ಆರ್ಥಿಕವಾಗಿ, ಸಂಘಟಿತವಾಗಿ ಪುನರ್ ನಿರ್ಮಾಣ ಮಾಡಲು ಮಾಡಿದ ಪ್ರಯತ್ನಗಳ ಫಲವಾಗಿ ನಮ್ಮ ಕುಲಭಾಂದವರಿಗೂ ನಮ್ಮ ಸಮಾಜದ ಬಗ್ಗೆ ಅಭಿಮಾನ ಮೂಡಿತು, ಇಂತಹ ಹತ್ತು ಹಲವು ಸಕಾರಾತ್ಮಕ ಕಾರ್ಯಗಳು ನಮ್ಮ ಯಶಸ್ಸಿನ ಮೆಟ್ಟಿಲುಗಳಾಯಿತು. **ಅಂದು ಮೈ ಕೊಡವಿ ಎದ್ದು ನಿಂತ ಮಹಾಸಭೆ ನೂತನ ಯೋಜನೆಗಳನ್ನು ಅಳವಡಿಸಿಕೊಂಡು ಸಮಾಜದ ಮುಂದೆ ಸಹಾಯಕ್ಕೆ ಹಸ್ತ ಚಾಚಿತು,** ಸಮಾಜ ಬಂಧುಗಳು ಸಹ ತಮ್ಮ ಹೃದಯ ಶ್ರೀಮಂತಿಕೆಯ ಸಹಾಯ, ಸಹಕಾರ ನೀಡಿ ನಮ್ಮನ್ನು ಮುನ್ನಡೆಸಿದರು.

ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ **ವಿದ್ಯಾನಿಧಿ, ವಿದ್ಯಾರ್ಥಿಮಿತ್ರ, ಲ್ಯಾಪ್‌ಟಾಪ್ ಯೋಜನೆ,** ಅಂಗವಿಕಲರ ಆರ್ಥಿಕ ಸದೃಡತೆಗಾಗಿ ಜೀವನ ಪರ್ಯಂತ ಪಿಂಚಣಿ ನೀಡುವ **ವಾಸವಿ ಚೇತನ,** 65 ವರ್ಷ ಮೇಲ್ಪಟ್ಟ ವಿಧವಾ ಮಾತೆಯರ ಸಂಕಷ್ಟಕ್ಕೆ ಸಹಕಾರ ನೀಡುವ **ಸಂಧ್ಯಾಶ್ರೀ,** ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರ ಭವ್ಯ ಭವಿಷ್ಯಕ್ಕೆ ಸ್ಪೂರ್ತಿ ಚೈತನ್ಯಗಳನ್ನು ತುಂಬುವ **ಪ್ರತಿಭೋತ್ಸವ,** ಆಡಳಿತಾತ್ಮಕ ಪರೀಕ್ಷೆಗಳಾದ **IAS, IPS, KAS,** ಇತ್ಯಾದಿಗಳನ್ನು ಬರೆಯಲು ಇಚ್ಛಿಸುವ ವಿದ್ಯಾರ್ಥಿಗಳಿಗೆ 5 ತಿಂಗಳ ಕಾಲ ಅತ್ಯುತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ ಊಟ, ವಸತಿ ಇತ್ಯಾದಿ, ನೀಡುವ **ವಾಸವಿ ಅಕಾಡಮಿ,** 120 ವಿದ್ಯಾರ್ಥಿಗಳಿಗೆ ಅತ್ಯುತ್ತಮ **ಹಾಸ್ಟೆಲ್** ವ್ಯವಸ್ಥೆ, ಬೆಂಗಳೂರು ನಗರಕ್ಕೆ ಆಗಮಿಸುವ ಕುಲಭಾಂದವರ ಅನುಕೂಲಕ್ಕಾಗಿ **18 ಅತಿಥಿ ಗೃಹಗಳು,** ರಾಜ್ಯದ ನಾನಾ ಭಾಗಗಳಲ್ಲಿ ಬೆಲೆ ಬಾಳುವ ಆಸ್ತಿಗಳು, **ಮೈಸೂರು ನಗರದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹಾಸ್ಟೆಲ್, ಸುಸಜ್ಜಿತ ಅತಿಥಿಗೃಹಗಳು, ವಾಸವಿ ಅಕಾಡಮಿ** ಇತ್ಯಾದಿಗಳನ್ನು ಒಳಗೊಂಡ ಕಟ್ಟಡ 2023 ಜನವರಿ ತಿಂಗಳಲ್ಲಿ ಉದ್ಘಾಟನೆ ಆಗಲಿದೆ. ಹೀಗೆ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ಸದಾಕಾಲ, ವರ್ಷಪೂರ್ತಿ ಕುಲಭಾಂದವರ ಸೇವೆಗೆ ಸಮರ್ಪಿಸಿಕೊಂಡಿರುವ ಮಹಾಸಭೆ ಇನ್ನೂ ಮುಂದಿನ ಐದು ವರ್ಷದಲ್ಲಿ ಧಾರ್ಮಿಕ, ಶೈಕ್ಷಣಿಕ, ಸಹಕಾರ ಕ್ಷೇತ್ರಗಳಲ್ಲಿ ಅಭೂತಪೂರ್ವ ಯೋಜನೆಗಳನ್ನು ರೂಪಿಸಿದೆ. ಹೂವಿನ ಜೊತೆ ನಾರು ದೇವರ ಪಾದ ಸೇರಿತು ಎನ್ನುವ ಹಾಗೆ ಮಹಾಸಭೆ ಮಾಡುತ್ತಿರುವ ಹಾಗೂ ಮಾಡಲು ಉದ್ದೇಶಿಸಿರುವ ಕಾರ್ಯಯೋಜನೆಗಳಿಂದ ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಆಗುವುದಲ್ಲದೆ, ನಮ್ಮ ಸಮಾಜದ ಘನತೆ ಗೌರವಗಳು ಮುಗಿಲೆತ್ತರಕ್ಕೇರುತ್ತದೆ, ನಾಗರೀಕ ಸಮುದಾಯಕ್ಕೆ ನಾವು ಆದರ್ಶವಾಗುತ್ತೇವೆ. ಬಂಧುಗಳೇ, ಜೀವನದಲ್ಲಿ ಗೆಲುವು ಸಾಧಿಸುವುದು ದೊಡ್ಡದಲ್ಲ. ಗೆಲುವು ದಕ್ಕಿಸಿಕೊಳ್ಳಲು ನೀವು ನಮಗೆ ನೀಡುವ ಸಹಕಾರವೇ ದೊಡ್ಡದು. ನಾವು ಬೆಳೆಯಲು ಕೆಲವು ಸಲ ನೋವು ಬೇಕು, ನಮ್ಮನ್ನು ನಾವು ಅರಿಯಲು ಸೋಲೂ ಬೇಕು. ಕಾರ್ಯಸಾಧಿಸುವಾಗ ನೋವಿನ ಅನುಭವವೂ ಬೇಕು. ಇದರಿಂದ ನಾವು ಪರಿಪಕ್ವವಾಗಿ ಮತ್ತಷ್ಟು ಮಗದಷ್ಟು ಸೇವೆಯನ್ನು ಸಮಾಜಕ್ಕೆ ನೀಡಬೇಕು.

**8–07–1908 ರಂದು ಅತ್ಯಂತ ಮಹತ್ವಾಕಾಂಕ್ಷೆಯಿಂದ ಮಾರ್ಕಾಪುರಂ ಚೆಂಗಯ್ಯ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಮೈಸೂರು ಸಂಸ್ಥಾನ ಆರ್ಯವೈಶ್ಯ ಮಹಾಸಭೆಗೆ 115 ವರ್ಷಗಳು.** ಸಮಾಜದ ನೂರಾರು ನೇತಾರರು ಕಾರ್ಯನಿರ್ವಹಿಸಿ ಉತ್ತಮವಾದ ಅಡಿಪಾಯವನ್ನು ಹಾಕಿರುವ ಪ್ರಸ್ತುತ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆತ್ಮಸ್ಥೈರ್ಯವನ್ನು ಮತ್ತಷ್ಟು ಸೇವಾ ಕಾರ್ಯಕ್ರಮಗಳ ಮೂಲಕ ಗಟ್ಟಿಗೊಳಿಸಬೇಕಾಗಿದೆ. ಯಾರೋ ಬಂದು ಬದಲಾವಣೆ ಮಾಡುತ್ತಾರೆ ಎಂದು ಕಾಯುವುದರಲ್ಲಿ ಅರ್ಥವಿಲ್ಲ, ನಾವೇ ಆ ಬದಲಾವಣೆ ತರಲು ಸಾದ್ಯ. ಮೊದಲು ನಾವು ಬದಲಾಗಬೇಕು. ಬನ್ನಿ ಕೈ ಜೋಡಿಸಿ, ಸಮಾಜ ನಿರ್ಮಾಣಕ್ಕೆ ಸಹಕರಿಸಿ. ದು:ಖ ತುಂಬಿದ ಮನಸ್ಸುಗಳನ್ನು, ಹೃದಯಗಳನ್ನು ಹಗುರಗೊಳಿಸಿ ಸಾಂತ್ವಾನ ನೀಡಿ ನಮ್ಮ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳೋಣ

**ಇತರರಿಗಾಗಿ ಯಾರು ಮರುಗುತ್ತಾರೋ**
**ಅವರೇ ನಿಜವಾಗಿ ಬದುಕಿರುವವರು**
**ಉಳಿದವರು ಬದುಕಿದ್ದು ಸತ್ತಂತೆ**

**ಆರ್ ಪಿ ರವಿಶಂಕರ್**
ಅಧ್ಯಕ್ಷರು

ADTV

# ಅಭಿನಂದನೆಗಳು

## ವಿದೇಶದಲ್ಲಿ ಅರಳಿದ ವಿಶ್ವ ರೂಪಿ ಪ್ರತಿಭೆಗಳು

### NAKSHA SATISH



She Graduated from Masters of Architecture in Urban Design Program (MAUD) with distinction ( highest honours of university received by only 5 students) from Harvard University Graduate School of Design. She was the India Design Leadership Fellow through her time at Harvard and also awarded several University Level Awards and Recognition at graduation ceremony.

1. Plimpton Poorvu Design Prize - Winning entry for a redevelopment of public housing project. This prize recognises innovation in Real Estate and Design - to a project that simultaneously balanced social, economic and financial goals. The design was awarded a cash prize of 25000$ to continue work with the New Rochelle Housing Authority in New York State. This work is advancing to protect the displacement of low income groups, racially segregated groups in the downtown
2. Unsung Hero Book Prize - A recognition by the Harvard Graduate School of Design Alumni Council for a student who student elected award that recognises the student through a book prize. This book will contributes to the well being of the student cohort. It is a have a bookplate with the student name that is archived in the library for years to come.
3. Class Marshall - She was selected to lead the entire urban design cohort in the main university procession. She represents the graduation cohort in the ceremonies and alumni events in future, forming a link between outside world and the school.

### SRINIVAS NARAYAN KARTHIKEYAN

He graduated from Masters of Architecture from Yale University School of Architecture.

1. Takenaka Travel Fellowship Recipient - A professional travel -practice fellowship that was awarded through competition to engage in architectural practice in Japan.
2. Global Innovators - As a part of the Tsai Centre for Innovation Thinking, he was selected to be a part of Global Innovators Program to develop design and social entrepreneurial solutions for challenges of Global South
3. Admissions Council Member - he was selected to be a part of the prestigious admissions committee that reviews student applications.

## Ph D ಪ್ರಧಾನ



ಶ್ರೀ ಆಕಾಶ್ ಶ್ರೀನಿವಾಸ

ಶ್ರೀ ಆಕಾಶ್ ಶ್ರೀನಿವಾಸರವರು ಪ್ರಸ್ತುತ India Foundation for Art ನಲ್ಲಿ Project Coordinator ಆಗಿದ್ದು, Proffessior ಡಾ|| ಪಾರ್ಥ ಆರ್ ಚೌಹಾನ್‌ರವರ ಮಾರ್ಗದರ್ಶನದಲ್ಲಿ ಪಂಜಾಬಿನ ಮೋಹಲಿಯಲ್ಲಿರುವ Indian Institute of science Education and Research (IISER) UNIVERSITY ನಲ್ಲಿ Ph D ಪದವಿಗಾಗಿ ನೋಂದಣಿ ಮಾಡಿಕೊಂಡಿದ್ದು Humanities and social sciences (Archaeology) ಎಂಬ ವಿಷಯದ ಬಗ್ಗೆ ಮಹಾ ಪ್ರಭಂದವನ್ನು ಮಂಡಿಸಿದ್ದರು. ದಿ. 26–05–2022 ರಲ್ಲಿ ನಡೆದ ಅಂತಿಮ ಸಂದರ್ಶನದಲ್ಲಿ ಉತ್ತೀರ್ಣರಾಗಿ Ph D ಪದವಿಗೆ ಭಾಜನರಾಗಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತದೆ. ಇವರ ಸಾಧನೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಭಿನಂದಿಸುತ್ತದೆ



ಶ್ರೀಮತಿ ಅಂಬಿಕಾ ಸಿ ಎ

ಶ್ರೀಮತಿ **ಅಂಬಿಕಾ** ಸಿ ಎ ರವರು ಬೆಂಗಳೂರು ಪ್ರತಿಷ್ಠಿತ K S School of Engineering and Management ಕಾಲೇಜಿನಲ್ಲಿ Librarian ಕಾರ್ಯ ನಿರ್ವಹಿಸುತ್ತಿದ್ದಾರೆ Proffessior ಡಾ|| ಪಿ ಗಣೇಶನ್‌ರವರ ಮಾರ್ಗದರ್ಶನದಲ್ಲಿ ತಮಿಳುನಾಡು ರಾಜ್ಯದ ಕರೈಕುಡಿಯ ALLAGAPPA UNIVERSITY ನಲ್ಲಿ Ph D ಪದವಿಗಾಗಿ ನೋಂದಣಿ ಮಾಡಿಕೊಂಡಿದ್ದು Library and information science ಎಂಬ ವಿಷಯದ ಬಗ್ಗೆ ಮಹಾ ಪ್ರಭಂದವನ್ನು ಮಂಡಿಸಿದ್ದರು. ದಿ. 19–1–2022 ರಲ್ಲಿ ನಡೆದ ಅಂತಿಮ ಸಂದರ್ಶನದಲ್ಲಿ ಉತ್ತೀರ್ಣರಾಗಿ Ph D ಪದವಿಗೆ ಭಾಜನರಾಗಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತದೆ.
ಇವರ ಸಾಧನೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಭಿನಂದಿಸುತ್ತದೆ

## ಮಹಾಸಭೆಯ ಯೋಜನೆಗಳಿಗೆ ನಾಮಕರಣ

### ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಶ್ರೀ ಆರ್ ಜಿ ಶ್ರೀನಿವಾಸ ಮೂರ್ತಿ




ಶ್ರೀ ಆರ್ ಜಿ ಶ್ರೀನಿವಾಸ ಮೂರ್ತಿ

ಕರ್ನಾಟಕ ರಾಜ್ಯದಲ್ಲಿ ಸಹಕಾರ ಕ್ಷೇತ್ರಕ್ಕೆ ಆರ್ಯವೈಶ್ಯರ ಕೊಡುಗೆ ಅಪಾರ. ಕಳೆದ 110 ವರ್ಷಗಳಿಂದಲೂ ಸಹಕಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಮ್ಮ ಸಮಾಜ ಪ್ರಸ್ತುತ 9 ಸಹಕಾರ ಬ್ಯಾಂಕುಗಳು 75ಕ್ಕೂ ಮೀರಿದ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 2ಲಕ್ಷಕ್ಕೂ ಅಧಿಕ ಸದಸ್ಯರನ್ನು ಹೊಂದಿದೆ. ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಮ್ಮ ಸಂಸ್ಥೆಗಳಿಂದ ವಾರ್ಷಿಕ ಸರಿ ಸುಮಾರು 1.5 ಲಕ್ಷ ಕೋಟಿ ರೂಪಾಯಿಗಳ ಬೃಹತ್ ವಹಿವಾಟು ನಡೆಯುತ್ತಿದೆ. ಇಂತಹ ಎಲ್ಲಾ ಸಂಸ್ಥೆಗಳಿಗೆ ಮತ್ತಷ್ಟು ಉತ್ತಮವಾದ ಮಾರ್ಗದರ್ಶನಗಳನ್ನು ನೀಡುವ ಮೂಲಕ ವ್ಯಾಪಾರ ವಹಿವಾಟುಗಳನ್ನು ಉನ್ನತ ದರ್ಜೆಗೇರಿಸಿ ಆದರ್ಶ ಸಂಸ್ಥೆಗಳನ್ನಾಗಿ ರೂಪಿಸಬೇಕೆಂಬ ಮಹತ್ವಕಾಂಕ್ಷೆ ಕರ್ನಾಟಕ ಆರ್ಯವೈಶ್ಯ ಮಹಾಸಭೆಯದ್ದಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಆರ್ಯವೈಶ್ಯ ಸಹಕಾರ ಬ್ಯಾಂಕ್ ಮತ್ತು ಸಂಘಗಳ ಮಹಾಮಂಡಳದ ಅಧ್ಯಕ್ಷರನ್ನಾಗಿ ಸಹಕಾರ ಕ್ಷೇತ್ರದಲ್ಲಿ ಅನುಭವವನ್ನು ಹೊಂದಿರುವ ಹಾಗೂ ವಾಣಿಜ್ಯೋದ್ಯಮದಲ್ಲಿ ಉತ್ತಮ ಸಾಧನೆಯನ್ನು ಮಾಡಿರುವ ದಾವಣಗೆರೆಯ ಶ್ರೀ ಆರ್ ಜಿ ಶ್ರೀನಿವಾಸ ಮೂರ್ತಿರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ.

ಶ್ರೀ ಆರ್ ಜಿ ಶ್ರೀನಿವಾಸ ಮೂರ್ತಿರವರು ಸಹಕಾರ ಕ್ಷೇತ್ರದ ಉನ್ನತಿಗಾಗಿ ತೆಗೆದುಕೊಳ್ಳುವ ಕಾರ್ಯಚಟುವಟಿಕೆಗಳಿಗೆ ಸಮಾಜದ ಪ್ರತಿಯೊಬ್ಬ ಬಂದುವೂ ಸಹಕಾರ ನೀಡಬೇಕೆಂದು ಕೋರುತ್ತೇವೆ.

### ಶ್ರೀ ವಾಸವಿ ವಿದ್ಯಾ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾಗಿ ಶ್ರೀ ಎಸ್ ಕೆ ಶೇಷಾಚಲ



ಶ್ರೀ ಎಸ್ ಕೆ ಶೇಷಾಚಲ

ಕರ್ನಾಟಕ ರಾಜ್ಯದಲ್ಲಿ ಆರ್ಯವೈಶ್ಯ ಸಮಾಜದ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಸುಮಾರು 70ಕ್ಕೂ ಹೆಚ್ಚು ಶಾಲೆಗಳನ್ನು ಒಳಗೊಂಡ 40ಸಾವಿರಕ್ಕೂ ಮೀರಿದ ವಿದ್ಯಾರ್ಥಿಗಳನ್ನು ಹೊಂದಿರುವ ಕರ್ನಾಟಕ ಆರ್ಯವೈಶ್ಯ ವಿದ್ಯಾ ಸಂಸ್ಥೆಗಳ ಒಕ್ಕೂಟಕೆ ಕ್ರಿಯಾಶೀಲ ವ್ಯಕ್ತಿತ್ವದ ಹಾಗೂ ನಾಲ್ಕು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಶ್ರೀ ಎಸ್ ಕೆ ಶೇಷಾಚಲರವರನ್ನು ಅಧ್ಯಕ್ಷರನ್ನಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭಾ ನೇಮಕ ಮಾಡಿದೆ.

ಶಿಕ್ಷಣ ಕ್ಷೇತ್ರದಲ್ಲಿ ಇರುವ ಸವಾಲುಗಳನ್ನು ಮೆಟ್ಟಿ ನಿಂತು ಮೌಲ್ಯಾಧಾರಿತ ಶಿಕ್ಷಣ ನೀಡುವ ಮೂಲಕ ನಮ್ಮ ಶಿಕ್ಷಣ ಪದ್ಧತಿಯನ್ನು ಉನ್ನತೀಕರಣ ಗೊಳಿಸಿ ದೇಶದ ಅಭಿವೃದ್ಧಿಗೆ, ಜ್ಞಾನಭರಿತ ಯುವ ಸಮೂಹವನ್ನು ನೀಡುವ ಸದುದ್ದೇಶವನ್ನು ಹೊಂದಿರುವ ಈ ಸಂಸ್ಥೆಗೆ ನಮ್ಮ ಸಮಾಜದಿಂದ ಕಾರ್ಯನಿರ್ವಹಿಸುತ್ತಿರುವ ಯಾವುದೇ ಶಿಕ್ಷಣ ಸಂಸ್ಥೆಗಳ ಹೆಸರು ನೊಂದಾಯಿಸಿಕೊಳ್ಳಲು ಅವಕಾಶವಿದೆ. ಹಾಗೂ ಹೊಸ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಇಚ್ಚಿಸುವವರಿಗೆ ಮಾರ್ಗದರ್ಶನವೂ ನೀಡಲಾಗುತ್ತದೆ. ಕುಲಬಾಂಧವರು ಇದರ ಸದುಪಯೋಗ ಪಡೆದುಕೊಳ್ಳಲು ಕೋರಿದೆ.

ADTV

# ವಾಸವಿ ದೇವಾಲಯಗಳ ಒಕ್ಕೂಟದ ಅಧ್ಯಕ್ಷರಾಗಿ ಶ್ರೀ ಆರ್ ಎಲ್ ಪ್ರಭಾಕರ್


ಶ್ರೀ ಆರ್ ಎಲ್ ಪ್ರಭಾಕರ್

**ನೂ**ರಾರು ವರ್ಷಗಳಿಂದ ರಾಜ್ಯದ ಉದ್ದಗಲಕ್ಕೂ ಪ್ರತಿಷ್ಠಾಪನೆಗೊಂಡು, ಧರ್ಮಸಂರಕ್ಷಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರಿ ಸುಮಾರು 265 ವಾಸವಿ ದೇವಾಲಯಗಳು ನಮ್ಮ ರಾಜ್ಯದಲ್ಲಿವೆ.

ಜನ ಸಂಖ್ಯೆಯಲ್ಲಿ ನಮ್ಮ ಸಮಾಜ ಬಹಳ ಸಣ್ಣದಾಗಿದ್ದರೂ ಧರ್ಮಸಂರಕ್ಷಣೆ ಹಾಗೂ ಧರ್ಮ ಜಾಗೃತಿಗಾಗಿ ನಮ್ಮ ಕೊಡುಗೆ ಅಪಾರ. ನಮ್ಮ ಪೂಜಾ ವಿಧಾನಗಳು ಸಹ ಏಕರೂಪ ಪದ್ಧತಿಯಾಗಿರದೆ ಆಯಾ ಪ್ರಾಂತ್ಯಗಳಿಗೆ ಅನುಗುಣವಾಗಿ ಪೂಜಾ ಪದ್ಧತಿಗಳನ್ನು ಬೆಳಸಿಕೊಳ್ಳಲಾಗಿದೆ. ಇಂದು ನಮಗೆ ಧರ್ಮಾನುಷ್ಠಾನದ ಮಾರ್ಗದರ್ಶಕರಾಗಿ ಪೂಜ್ಯ ಗುರುಗಳು ಲಭಿಸಿದ್ದಾರೆ. ರಾಜ್ಯದ ನಾನಾ ಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ವಾಸವಿ ದೇವಾಲಯಗಳ ಆಡಳಿತ ವರ್ಗದವರನ್ನು ಒಗ್ಗೂಡಿಸಿ, ದೇವಾಲಯಗಳ ಆಡಳಿತ ವ್ಯವಸ್ಥೆಗೆ ಹಾಗೂ ಪೂಜೆ, ಸೇವೆ ಇತ್ಯಾದಿಗಳ ಬಗ್ಗೆ ಹೊಸತನವನ್ನು ತರಲು ಒಕ್ಕೂಟ ಕಾರ್ಯನಿರ್ವಹಿಸುತ್ತದೆ. ಇಂದಿನ ಪರಸ್ಥಿತಿಗೆ ಶ್ರೀ ವಾಸವಿ ದೇವಾಲಯಗಳ ಒಕ್ಕೂಟ ಅತ್ಯಂತ ತುರ್ತಾಗಿದೆ ಎಂದು ಭಾವಿಸಿದ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ದಾವಣಗೆರೆಯ ಚೈತನ್ಯಪೂರ್ಣ ವ್ಯಕ್ತಿತ್ವದ ಶ್ರೀ ಆರ್ ಎಲ್ ಪ್ರಭಾಕರ್ ರವರನ್ನು ಒಕ್ಕೂಟಕ ಅಧ್ಯಕ್ಷರನ್ನಾಗಿ ನೇಮಿಸಿ ಪೂರ್ಣ ಪ್ರಮಾಣದ ಕಾರ್ಯಕಾರಿ ಸಮಿತಿಯನ್ನು ರಚಿಸಿಕೊಳ್ಳುವಂತೆ ಕೋರಿದೆ.

ಶ್ರೀ ವಾಸವಿ ದೇವಾಲಯಗಳ ಒಕ್ಕೂಟದಲ್ಲಿ ಕಾರ್ಯ ನಿರ್ವಹಿಸಲು ಇಚ್ಚಿಸುವ ಯಾವುದೇ ವ್ಯಕ್ತಿಗಳು ತಮ್ಮ ಇಚ್ಚೆಯನ್ನು (ಪ್ರಸ್ತುತ ವಾಸವಿ ದೇವಾಲಯಗಳ ಕಾರ್ಯಕಾರಿ ಸಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿರಬೇಕು) ಕರ್ನಾಟಕ ಆರ್ಯವೈಶ್ಯ **ಮಹಾಸಭೆಯ ದೂರವಾಣಿ ಸಂಖ್ಯೆ 9663900439** ಗೆ ಮೆಸೇಜ್ ಮಾಡಿ ತಿಳಿಸುವುದರ ಮೂಲಕ ಸಹಕರಿಸಿ 15 ಜನರ ಈ ಸಮಿತಿಯಲ್ಲಿ ರಾಜ್ಯದ ಎಲ್ಲಾ ಭಾಗಗಳ ಕುಲಬಾಂಧವರು ಭಾಗವಹಿಸುವಂತೆ ಮಾಡಲು ಸಹಕಾರಿಯಾಗುತ್ತದೆ. ದೇವಾಲಯದ ಆಡಳಿತ ವರ್ಗಗಳ ಪೂರ್ಣ ಸಹಕಾರದಿಂದ ಮಾತ್ರವೇ ಶ್ರೀ ವಾಸವಿ ದೇವಾಲಯದ ಒಕ್ಕೂಟದ ಯಶಸ್ಸು ಸಾಧ್ಯವಾಗುತ್ತದೆ.


## ಶ್ರೀ ವಾಸವಿ ವಾನಪ್ರಸ್ಥಾಶ್ರಮ

**ಹಳೆ ಪೋಸ್ಟ್ ಆಫೀಸ್ ರಸ್ತೆ , ಬ್ರಾಹ್ಮಣರ ಬೀದಿ, ಹುಣಸೂರು**

**ಮೈ**ಸೂರು ನಗರದಿಂದ ಕೇವಲ 40 ನಿಮಿಷಗಳ ದೂರದಲ್ಲಿರುವ ಹುಣಸೂರು ನಗರದ ಹೃದಯ ಭಾಗದಲ್ಲಿ ಪ್ರಕೃತಿಯ ಸಸ್ಯ ಸಿರಿಯ ನಡುವೆ ತಲೆ ಎತ್ತಿ ನಿಂತಿದೆ ಶ್ರೀ ವಾಸವಿ ವಾನಪ್ರಸ್ಥಾಶ್ರಮ.

60 ರಿಂದ 75 ವರ್ಷ ವಯೋಮಿತಿಯ ಆರೋಗ್ಯವಂತ ಪುರಷರು ಹಾಗು ಮಹಿಳೆಯರು ವೃದ್ಧಾಶ್ರಮ ಸೇರಿಕೊಳ್ಳಲು ಮುಕ್ತವಾದ ಅವಕಾಶವಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಜೀವನದ ಸಂಧ್ಯಾ ಕಾಲವನ್ನು ಶಾಂತಿ ನೆಮ್ಮದಿಗಳಿಂದ ಕಳೆಯಲು ಇದೊಂದು ಪ್ರಶಸ್ತವಾದ ತಾಣ ಆಸಕ್ತರು, ತಿಳಿದವರು ವೃದ್ಧಾಶ್ರಮದಲ್ಲಿ ಆಶ್ರಯಕ್ಕಾಗಿ, ಹಂಬಲಿಸುತ್ತಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ.

**ವಿ.ಸೂ: ಸಸ್ಯಹಾರಿಗಳಿಗೆ ಮಾತ್ರ ಅವಕಾಶವಿರುತ್ತದೆ.**



ಎ ಆರ್ ರವಿಕುಮಾರ್
ಮೊ ಸಂಖ್ಯೆ : 9448004194

ಜಯಣ್ಣ ಕೆ
ಚೇರ್ಮನ್

ಎನ್ ಸಿ ಸತೀಶ್
ಸಂಚಾಲಕರು


### ಮಹಾಸಭೆಯ ಕಾರ್ಯಕಾರಿ ಸಮಿತಿಗೆ
## ನಾಮ ನಿರ್ದೇಶನ ಸದಸ್ಯರು


ಮಾನಂದಿ ರಮೇಶ್


ವೀರಭದ್ರಪ್ಪ ಇಲ್ಲೂರು


## ವಾಸವಿ ಹಾಸ್ಟೆಲ್(ರಿ)

ಬಿ.ಹೆಚ್ ರಸ್ತೆ, ತುಮಕೂರು–572101

**ಹಾಸ್ಟೆಲ್‌ಗೆ ದಾಖಲಾತಿ ಪ್ರಾರಂಭವಾಗಿದೆ.**

ಆರ್ಯವೈಶ್ಯ ಜನಾಂಗದ ಕಾಲೇಜು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಹಾಸ್ಟೆಲ್‌ನ್ನು ಪುನರಾರಂಭಿಸಿದ್ದೇವೆ. ವಿದ್ಯಾರ್ಥಿಗಳು ದಾಖಲಾಗಲು ಸೂಚಿಸಿದೆ.

ದೂರವಾಣಿ ಸಂಖ್ಯೆ: 9448826524 / 9342590776





## ಶ್ರೀ ವಾಸವಿ ಗೋಶಾಲೆ

**ಹಳೆ ಪೋಸ್ಟ್ ಆಫೀಸ್ ರಸ್ತೆ , ಬ್ರಾಹ್ಮಣರ ಬೀದಿ, ಹುಣಸೂರು**

## ಗೋದಾನಿಗಳಿಗೆ ಸುವರ್ಣ ಅವಕಾಶ

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶ್ರಯದಲ್ಲಿ ಮೈಸೂರು ಜಿಲ್ಲೆ ಹುಣಸೂರು ನಗರದಲ್ಲಿ ನವೆಂಬರ್ 14 2021 ರಂದು ಪ್ರಾರಂಭವಾದ **ಶ್ರೀ ವಾಸವಿ ಗೋಶಾಲೆ** ಹಸು ಮತ್ತು ಕರುಗಳಿಂದ ಕಂಗೊಳಿಸುತ್ತಿದೆ.

**ಒಂದು ಗೋವನ್ನು ದಾನ ಮಾಡಿದರೆ ಕೋಟಿ ದೇವಾಲಯ ಕಟ್ಟಿದ ಫಲ,** ಒಂದು ಗೋವನ್ನು ರಕ್ಷಿಸಿದರೆ ಲಕ್ಷ ಯಜ್ಞಗಳ ಫಲ, ಒಂದು ಗೋಶಾಲೆ ಕಟ್ಟಿಸಿದರೆ ಸಾಕ್ಷಾತ್ ಜಗನ್ಮಾತೆಯ ಆಲಯ ಕಟ್ಟಿದ ಫಲ, ಗೋಮಯ, ಗೋಮೂತ್ರದಿಂದ ಮಾಡಿದ ವ್ಯವಸಾಯ ದೇಶದ ಪ್ರಗತಿಗೆ ಫಲಪ್ರದ, ಒಂದು ಗೋವಿಗೆ ಆಹಾರ ನೀಡಿದರೆ ಮುಕ್ಕೋಟಿ ದೇವರಿಗೆ ನೈವೇದ್ಯ ನೀಡುವ ಫಲ.

### ಗೋದಾನ ಮಾಡಿ ಗೋದಾನಿಗಳಾಗಿ ಅಥವಾ ಗೋಸೇವೆಗೆ ಸಹಕರಿಸಿ

ಗೋಸಂರಕ್ಷಣೆ, ಗೋಸಾಕಾಣಿಕೆಗೆ ಉದಾರ ವಂತಿಗೆಗಳನ್ನು ನೀಡಿ, ಸಹಕರಿಸಿ. ನಿಮ್ಮ ಮನೆ ಮಂದಿಯ ಹುಟ್ಟು ಹಬ್ಬ, ಮದುವೆ ವಾರ್ಷಿಕೋತ್ಸವಗಳು, ಹಿರಿಯರ ಶ್ರಾದ್ದಗಳ ಪುಣ್ಯ ದಿನದಂದು ಗೋಮಾತೆಗೆ ಸೇವೆ ಸಲ್ಲಿಸಲು ಮರೆಯದಿರಿ.

**ಒಂದು ದಿನದ ಸೇವೆಗೆ ರೂ.2500/–**

**ಒಂದು ಹೊತ್ತಿನ ಸೇವೆಗೆ ರೂ.1000/–**

**ವಂತಿಗೆಗಳನ್ನು ಕಳುಹಿಸಲು**

**KARNATAKA ARYAVYSYA MAHASABHA,**
**CENTRAL BANK OF INDIA**
**GANDHINAGARA BRANCH,**
**A/C NO. : 1112824877,**
**I F S C : CBIN0281198**

ವಂತಿಗೆ ಹಣ ವರ್ಗಾವಣೆ ಆದ ನಂತರ ಕೂಡಲೇ ಮಹಾಸಭೆಯನ್ನು ಸಂಪರ್ಕಿಸಿ, ಮಾಹಿತಿ ನೀಡಿ ರಸೀದಿ ಪಡೆಯಲು ಮರೆಯದಿರಿ.

WhatsApp 9663900439

ನಿಮ್ಮ ವಂತಿಗೆಗಳಿಗೆ ಆದಾಯ ತೆರಿಗೆ ಕಲಂ 80G ಅನ್ವಯ ವಿನಾಯಿತಿ ಇರುತ್ತದೆ.

ಹೆಚ್ಚಿನ ವಿವರಗಳಿಗೆ
ಎ.ಆರ್ ರವಿಕುಮಾರ್, ಸಂಘಟನಾ ಕಾರ್ಯದರ್ಶಿ
ಮೊ.ನಂ. 9448004194

# ಕರ್ನಾಟಕ ಆರ್ಯವೈಶ್ಯ ಮಹಾಸಭಾ(ರಿ)

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ಫೊ : 080–22206151 – 22206152 – 22206153 E-mail : kavmss@gmail.com Website : www.kavms.com

## ರಾಷ್ಟ್ರಮಟ್ಟದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

# ವಾಸವಿ ಎಕ್ಸಲೆನ್ಸ್ ಅವಾರ್ಡ್ಸ್–2022

suvarna news
ಕನ್ನಡಪ್ರಭ

## ಮಾದರಿ ಅರ್ಜಿ

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 31.07.2022**

ಪ್ರತ್ಯೇಕ ಬಿಳಿಹಾಳೆಯಲ್ಲಿ ಅರ್ಜಿ ಬರೆದು ತುಂಬಿಸಿ

| |
|---|
| 1. ಅರ್ಜಿದಾರರ ಹೆಸರು ಮತ್ತು ವಿಳಾಸ: |
| ಮೊಬೈಲ್, ದೂರವಾಣಿ ಸಂಖ್ಯೆ: |
| ಇಮೇಲ್: |
| ವೆಬ್‌ಸೈಟ್ ಇದ್ದಲ್ಲಿ: |
| ವ್ಯಾಪಾರ ಸಂಸ್ಥೆ ಸ್ಥಾಪನೆಯಾದ ವರ್ಷ: |
| 2. ಸಂಪರ್ಕಿಸಬೇಕಾದ ವ್ಯಕ್ತಿಯ ಹೆಸರು: |
| ಹುದ್ದೆ ಮತ್ತು ದೂರವಾಣಿ ಸಂಖ್ಯೆ: |
| 3. ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ |
| 4. ವ್ಯಾಪಾರ ಸಂಸ್ಥೆಯ ಸ್ವರೂಪ(ಮಾಲೀಕತ್ವ) |
| 5. 31–3–2022 ರವರೆಗೆ ಪಡೆದಿರುವ ಪ್ರಶಸ್ತಿ ಪುರಸ್ಕಾರಗಳ ವಿವರ |
| 6. ವಹಿವಾಟು ನಡೆಸುತ್ತಿರುವ ಪ್ರದೇಶ–ವ್ಯಾಪ್ತಿ |
| 7. ವಾಣಿಜ್ಯ ವ್ಯವಹಾರ/ಕೈಗಾರಿಕೆ/ಸೇವಾರಂಗ ಕೃಷಿ/ಇತರೆ ನಿಮ್ಮ ಆಯ್ಕೆಯ ಕ್ಷೇತ್ರ |
| 8. ನಿಮ್ಮ ಮತ್ತು ಸಂಸ್ಥೆಯ ಸಾಧನೆಯ ವಿವರ(400 ಪದಗಳಿಗೆ ಮೀರಬಾರದು) ಬೇರೆ ಹಾಳೆಯಲ್ಲಿ ಮುದ್ರಿಸಿ ಲಗ್ಗತ್ತಿಸಿ |

1. ಕೃಷಿ ಕ್ಷೇತ್ರ 2. ವಾಣಿಜ್ಯ ಕ್ಷೇತ್ರ 3. ಕೈಗಾರಿಕೆ (ತಯಾರಿಕೆ)
4. ಸಮೂಹ ಮಾಧ್ಯಮ ಮತ್ತು ಮನರಂಜನೆ
(ವಿದ್ಯುನ್ಮಾನ ವಾಹಿನಿಗಳು, ಪತ್ರಿಕಾಮಾಧ್ಯಮ ಇತ್ಯಾದಿ)
5. ಸೇವಾ ಉದ್ಯಮ
(ವ್ಯಕ್ತಿ ನಿರತರು ಹೊರತುಪಡಿಸಿ (ಐಟಿ ಉದ್ಯಮಗಳು ಮತ್ತು ಸಂಬಂಧಿಸಿದ ವ್ಯವಹಾರಗಳು)
6. ವಿದ್ಯಾಸಂಸ್ಥೆಗಳು (ಆರ್ಯವೈಶ್ಯ ಸಮಾಜದಿಂದ ಕಾರ್ಯನಿರ್ವಹಿಸುತ್ತಿರುವ ವಿದ್ಯಾಸಂಸ್ಥೆಗಳು)
7. ಸಹಕಾರಕ್ಷೇತ್ರ (ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳು)
8. ವೃತ್ತಿಪರ ಕ್ಷೇತ್ರ (ವಕೀಲರು, ಲೆಕ್ಕಪರಿಶೋಧಕರು, ವೈದ್ಯರು, ಇಂಜಿನಿಯರ್ಸ್)
9. ಯುವ ಉದ್ಯಮಿ (40 ವರ್ಷದೊಳಗಿನ ಯುವ ಉದ್ಯಮಿಗಳು ಮಾತ್ರ)
10. ಸಾಧಕ–ಮಹಿಳಾ ವಿಭಾಗ
(ಯಾವುದೇ ಒಂದು ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆಸಲ್ಲಿಸಿರುವವರು)
11. ಸಾಧಕ–ಪುರುಷ ವಿಭಾಗ
(ಯಾವುದೇ ಒಂದು ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವವರು)
12. ಕಲೆ ಮತ್ತು ಸಾಹಿತ್ಯ
13. ಸಮಾಜಸೇವೆ
14. ಸಾಧಕ ಮಕ್ಕಳ ವಿಭಾಗ (14 ವರ್ಷದೊಳಗಿನ ಮಕ್ಕಳಿಗೆ ಮಾತ್ರ)

**9.** ಪ್ರಶಸ್ತಿಗಾಗಿ ತಾವು ಪರಿಗಣಿಸಿರುವ ವಿಭಾಗದ ಸಂಖ್ಯೆಯನ್ನು ಕೆಳಗೆ ಕೊಟ್ಟಿರುವ ಅಂಕಣದಲ್ಲಿ ಬರೆಯಿರಿ
Category under which applied for (please tick(✓ ) the appropriate No.)

| | | | | | | | | | | | | | |
|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |

**10.** value of Turnover of the Business( Trade/Manufacturing/service sector)

| Sl. | No.Financial Year | Total Sales (Rs.) | Total Exports | | |
|---|---|---|---|---|---|
| 1. | 2020-21 | | | | |
| 2. | 2021-22 | | | | |

**11.** Prouducts/Services manufactured/traded-------------------------------------------------------------------

**12.** Are you a llife Member of Mahasabha. If so please provide your membership number

I/We hereby undertake that all the information provided by me/us in this application is factual and habeen fully verified me/us

signature

Date: Place: Name and address of the applicant

## ಗಮನಿಸಿ

1. ವಾಣಿಜ್ಯ ವ್ಯವಹಾರ/ಉತ್ಪದನಾಕ್ಷೇತ್ರ/ಸೇವಾ ವ್ಯವಹಾರ ಕ್ಷೇತ್ರಗಳವರು/ಉದ್ಯೋಗ ಸೃಷ್ಟಿ/ಹೊಸ ಆವಿಷ್ಕಾರಗಳು/ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ಅಲ್ಲದೆ, ಹಣಕಾಸು ವಿವರಗಳನ್ನೂ ಚಾರ್ಟೆಡ್ ಅಕೌಂಟೆಂಟ್ ರವರ ಸಹಿ ಮತ್ತು ಸೀಲ್‌ನೊಂದಿಗೆ ಪ್ರಮಾಣ ಪತ್ರ ಸಹ ಸಲ್ಲಿಸಬೇಕಾದುದು ಕಡ್ಡಾಯವಾಗಿರುತ್ತದೆ. ವಹಿವಾಟು ಸ್ಥಳದ (ಭಾವಚಿತ್ರ/ಸರ್ಟಿಫಿಕೇಟ್/ಪತ್ರಿಕಾ ಪ್ರಕಟಣೆಗಳ ಪ್ರತಿಗಳು)

2. ಉಳಿದ ಎಲ್ಲಾ ವಿಭಾಗಗಳಿಗೆ ಸ್ವ–ವಿವರಣೆಯೊಂದಿಗೆ ಸಂಬಂಧ ಪಟ್ಟ ಸಾಧನೆಗಳನ್ನು ದೃಢೀಕರಸುವ ಅಗತ್ಯ ದಾಖಲೆಗನ್ನು ಆಯಾ ರಂಗದ ನಿಯೋಜಿತ ಮತ್ತು ಮಾನ್ಯತೆ ಪಡೆದಿರುವವರಿಂದ ಪ್ರಮಾಣೀಕರಿಸಿ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಲಗತ್ತಿಸಿ ಸಲ್ಲಿಸಬೇಕು. ಮತ್ತು ಸಾಂದರ್ಭಿಕ ಚಿತ್ರಗಳು/ಪ್ರಶಸ್ತಿಗಳು/ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ ಜೆರಾಕ್ಸ್ ಪ್ರತಿಗಳು.

## ಸಾಮಾನ್ಯ ನಿಬಂಧನೆಗಳು

1. ಅರ್ಜಿದಾರರು ಕರ್ನಾಟಕದಲ್ಲಿ ಕನಿಷ್ಠ ಹತ್ತುವರ್ಷಗಳಿಂದಾದರೂ ವಾಸಿಸುತ್ತಿರುವ ಆರ್ಯವೈಶ್ಯ ಜನಾಂಗದ 102 ಗೋತ್ರದಲ್ಲಿ ಒಬ್ಬರಾಗಿರಬೇಕು. ಕರ್ನಾಟಕ ಆರ್ಯವ್ಯಶ್ಯ ಮಹಾಸಭೆಯ ಸದಸ್ಯರೂ ಆಗಿರಬೇಕು.

2. ಅರ್ಜಿದಾರರು ವಾಣೀಜ್ಯ/ವ್ಯವಹಾರ/ತಯಾರಿಕಾ/ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ( 19–20/20–21/21–22) ಸಾಲಿನಲ್ಲಿ ಪ್ರತಿವರ್ಷ ಕನಿಷ್ಠ 50 ಕೋಟಿ ರೂಪಾಯಿಗಳ ವಹಿವಾಟ ಸಾಧಿಸಿರಬೇಕು.

3. ಕಲೆ ಮತ್ತು ಸಾಹಿತ್ಯ ವಿಭಾಗದಲ್ಲಿ ಪುರಸ್ಕೃತಗೊಳ್ಳಲು ಅಪೇಕ್ಷಿತರು ರಾಜ್ಯ/ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಂಡು ಮಾನ್ಯತೆ ಪಡೆದವರಾಗಿರಬೇಕು. ಮತ್ತು ಅದಕ್ಕೆ ಸಂಬಂಧ ಪಟ್ಟ ದಾಖಲೆಗಳು/ಪುರಾವೆಗಳು/ಪತ್ರಿಕಾ ಪ್ರಕಟಣೆಗಳು/ವಿವರಗಳು/ಸಾಂದರ್ಭಿಕ ಭಾವಚಿತ್ರಗಳು ಲಗತ್ತಿಸಬೇಕು. ಮತ್ತು ಸದರಿ ಕ್ಷೇತ್ರಗಳಲ್ಲಿನ ಉನ್ನತ ಸ್ಥಾನದ ಗೌರವಾನ್ವಿತ ವ್ಯಕ್ತಿಗಳಿಂದ ಪ್ರಮಾಣ ಪತ್ರ ಸಹ ಸಲ್ಲಿಸಬೇಕಾದುದು ಅತ್ಯಗತ್ಯ ಮತ್ತು ಅನಿವಾರ್ಯ.

4. ಕನಿಷ್ಠ 5 ವರ್ಷಗಳಿಂದ ನಿರಂತರವಾಗಿ ವೈದ್ಯಕೀಯ/ಬಡತನನಿವಾರಣೆ/ಸ್ವಚ್ಛತಾ ಆಂದೋಲನ ಮುಂತಾದ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಾ ಇರುವ ಸೇವಾ ಸಂಸ್ಥೆಗಳು ಮತ್ತು ಅದಕ್ಕೆ ಸಂಬಂಧಿತ ಕ್ಷೇತ್ರದ ಪರಿಣಿತ–ರಿಂದ ಮತ್ತು ಪ್ರಮಾಣ ಪತ್ರ ನೀಡಲು ಮಾನ್ಯತೆ ಪಡೆದಿರುವವರಿಂದ ಪಡೆದು ಸಾಂದರ್ಭಿಕ ಭಾವಚಿತ್ರ, ಪ್ರಶಸ್ತಿ, ಪುರಸ್ಕಾರಗಳು, ಸುದ್ದಿ ಸಮಾಚಾರಗಳ ಜೆರಾಕ್ಸ್ ಪ್ರತಿ, ಮುಂತಾದ ಅಗತ್ಯ ದಾಖಲೆಗಳೊಂದಿಗೆ ಅರ್ಜಿಸಲ್ಲಿಸಬಹುದು.

5. ವಿದ್ಯಾ ಕ್ಷೇತ್ರದ ವಿಭಾಗದಲ್ಲಿ ವಿದ್ಯಾಸಂಸ್ಥೆಗಳು ಮತ್ತು ವಿದ್ಯಾಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ವ್ಯಕ್ತಿಗಳು ಅರ್ಜಿ ಹಾಕಬಹುದು ಆದರೆ ಸದರಿ ವ್ಯಕ್ತಿ ಮತ್ತು ಸಂಸ್ಥೆ ಕನಿಷ್ಠ ಹತ್ತು ವರ್ಷಗಳಿಂದ ಅಸ್ತಿತ್ವದಲ್ಲಿದ್ದು, ಗಣನೀಯವಾದ ಸಾಧನೆ ಮಾಡಿರಬೇಕು/ವಿದ್ಯಾರ್ಥಿಗಳ ಸಂಖ್ಯೆ/ ಉತ್ತೀರ್ಣರಾದವರ ಸಂಖ್ಯೆ/ಹೊಸ ಸಾಧ್ಯತೆಗಳ ಅಳವಡಿಕೆ/ಬೇರೆ ಸಂಸ್ಥೆಗಳಿಗಿಂತ ಹೇಗೆ ಭಿನ್ನವಾಗಿದೆ ಮತ್ತು ವಿಶೇಷವಾಗಿದೆ ಎಂಬುದರ ವಿವರಣೆಯೊಂದಿಗೆ ಸಂಬಂಧಪಟ್ಟ ಕ್ಷೇತ್ರದ ಪರಿಣಿತರಿಂದ ದೃಢೀಕರಣವನ್ನು ನೀಡಬೇಕು. ಈಗಾಗಲೇ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅದರ ಪ್ರತಿಗಳೊಂದಿಗೆ ಮತ್ತು ಅಗತ್ಯವಾದ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

6. ಕೃಷಿ ಕ್ಷೇತ್ರದಲ್ಲಿ ಬೆಳೆಗಳ ವೈವಿಧ್ಯತೆ, ಪ್ರತಿ ಎಕರೆಯಿಂದ ವಾರ್ಷಿಕವಾಗಿ ಹೆಚ್ಚು ಆದಾಯ ಉತ್ಪತ್ತಿ ಮಾಡುತ್ತಿರುವವರು, ಸಾವಯವ ಕೃಷಿ,ಗ್ರೀನ್ ಹೌಸ್/ನೆಟ್ ಹೌಸ್/ ಪ್ಲೋರಿಕಲ್ಚರ್ ನಂತಹ ವಿವಿಧ ಹೊಸ ಸಾಗುವಳಿ ಕ್ರಮಗಳನ್ನು ಅಳವಡಿಸಿಕೊಂಡು ಮಾದರಿ ಕೃಷಿಕರಾಗಿರುವವರು, ಸಂಸ್ಥೆಗಳು ಕನಿಷ್ಠ 5 ವರ್ಷಗಳಿಂದ ಸದರಿ ಮಾದರಿ ಕೃಷಿಯಲ್ಲಿ ಯಶಸ್ವಿಯಾಗಿ ತೊಡಗಿಸಿ ಕೊಂಡಿರುವವರು. ಈಗಾಗಲೇ ಕೃಷಿ ಪುರಸ್ಕಾರ, ಪ್ರಸಶ್ತಿಗಳನ್ನು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪಡೆದಿರುವವರು ಅರ್ಜಿಯೊಂದಿಗೆ ಸದರಿ ಪುರಸ್ಕಾರಗಳ ನಕಲುಗಳನ್ನು ಸಲ್ಲಿಸಬೇಕು. ಸಂಬಂಧಿತ ಕ್ಷೇತ್ರದ ಪರಿಣಿತರಿಂದ ಅಥವಾ ಪ್ರಮಾಣಪತ್ರ ನೀಡಲು ಮಾನ್ಯತೆ ಪಡೆದಿರುವವರಿಂದ ದೃಢೀಕರಣ ಪಡೆದು ಸಾಂದರ್ಭಿಕ ಭಾವಚಿತ್ರ, ಪ್ರಶಸ್ತಿ, ಪುರಸ್ಕಾರಗಳು, ಪತ್ರಿಕಾ ಪ್ರಕಟಣೆಗಳ ಜೆರಾಕ್ಸ್ ಪ್ರತಿ ಮುಂತಾದ ಅಗತ್ಯ ದಾಖಲೆಗಳೊಂದಿಗೆ ಅರ್ಜಿಸಲ್ಲಿಸಬೇಕು.

7. ಕರ್ನಾಟಕ ಆರ್ಯವೈಶ್ಯ ಮಹಾಸಭೆವತಿಯಿಂದ ಜೂರಿ ಸಮಿತಿ(ತೀರ್ಪುಗಾರರು)ಯನ್ನು ರಚಿಸಲಾಗಿರುತ್ತದೆ. ಜೂರಿ ಸಮಿತಿಯ ತೀರ್ಮಾನವೇ ಅಂತಿಮ.

8. ಯಾವುದೇ ಕ್ಷೇತ್ರದ ವಿಭಾಗಕ್ಕೆ ಕನಿಷ್ಠ ಸಂಖ್ಯೆಯ ಅಭ್ಯರ್ಥಿ ಲಭ್ಯವಿಲ್ಲದಿದ್ದರೆ ಈ ಕ್ಷೇತ್ರವನ್ನು ಪುರಸ್ಕಾರ ವ್ಯಾಪ್ತಿಯಿಂದ ವಜಾ ಮಾಡಲಾಗುತ್ತದೆ.

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152